ಕರ್ನಾಟಕ ವಿಧಾನ ಸಭೆ

ಶುಕ್ರವಾರ ೧೬ನೇ ಸೆಪ್ಟೆಂಬರ್ ೧೯೬೩

ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ೯ ಗಂಟೆಗೆ ಸಮಾವೇಶಗೊಂಡಿತು.

ಶ್ರೀ ಸಿ. ವೀರಣ್ಣನವರು (ಉಪಾಧ್ಯಕ್ಷರು) ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.

Statement by the Minister

Re : Collapse of Gangaram Building at Gandhinagar Bangalore

ಶ್ರೀ ಎಂ. ರಘುಪತಿ.—ಬಹು ಅಂತಸ್ತಿನ ಕಟ್ಟಡ ಕುಸಿದು ಬಿದ್ದು ಕಳೆದ ಆ ದಿನಗಳಿಂದ ಸತತವಾಗಿ ಸಿಕ್ಕಿಹಾಕಿಕೊಂಡಿರುವವರ ಪ್ರಾಣ ರಕ್ಷಣೆಗಾಗಿ ಹೋರಾಟ ನಡೆಯುತ್ತಿದೆ. ಅಲ್ಲಿ ನಿನ್ನೆಯ ದಿವಸ ಒಂದು ದೊಡ್ಡ ಪ್ರಾಣಾಪಾಯದಲ್ಲಿ ೩೦ ಅಡಿ ಆಳದಲ್ಲಿ ಟನಲ್ ತೋಡಿ, ಗೋಡೌನ್‌ನಲ್ಲಿದ್ದ ಹೆಂಗಸರನ್ನು ಮತ್ತು ಇತರೆ ದೇವಿಪ್ರಸಾದ್‌ರವರನ್ನು ಟನಲ್‌ನಿಂದ ಹೊರಗೆ ತೆಗೆಯಬೇಕೆಂದು ಮಾಡಿದಂತಹ ಸರ್ವ ಪ್ರಯತ್ನ ವಿಫಲವಾಯಿತು. ಸರ್ವ ಪ್ರಯತ್ನಗಳು ವಿಫಲವಾದ ಮೇಲೆ ರಾತ್ರಿ ೨ ಗಂಟೆಯಲ್ಲಿ ಒಬ್ಬ ಹೆಣ್ಣುಮಗಳ ಶಬ್ದ ಕೇಳಿದ ತಕ್ಷಣ ಸತತವಾಗಿ ರಾತ್ರಿ ೨ ಗಂಟೆಯಿಂದ ಹೊರ ತೆಗೆಯುವ ಕೆಲಸವನ್ನು ಪ್ರಾರಂಭ ಮಾಡಿ ಸುಮಾರು ೬-೧೫ ಗಂಟೆಯಲ್ಲಿ ಈ ಹೆಣ್ಣುಮಗಳನ್ನು ಜೀವಂತವಾಗಿ ಹೊರಗೆ ತೆಗೆಯಲಾಗಿದೆ. ಈ ಹೆಣ್ಣುಮಗಳು ೪ ದಿವಸಗಳ ಕಾಲ ತನ್ನ ಜೀವಕ್ಕಾಗಿ ಹೋರಾಟ ನಡೆಸಿ ಗೆದ್ದು ಹೊರಬಂದಿದ್ದಾರೆ. ಆಕೆಯ ಹೆಸರು ವಿಮಾನಾಕ್ಷಿ. ಆಕೆ ಈಗ ಚಾತನಾಡುತ್ತಿದ್ದಾರೆ. ಆಕೆಯ ಪತಿ ಕೃಷ್ಣಾಕರನ್ ಎಂದು ಹೇಳಿದ್ದಾರೆ. ಆತನು ಕೆ.ಎಸ್.ಆರ್.ಪಿ. ಯಲ್ಲಿ ಕೆಲಸ ಮಾಡುತ್ತಾರೆಂದು ಹೇಳಿದ್ದಾಳೆ. ವಿಮಾನಾಕ್ಷಿಯನ್ನು ಹೊರಗೆ ತೆಗೆಯುವ ಸಂದರ್ಭದಲ್ಲಿ ಆಕೆಯ ಕಾಲನ್ನು ಹಿಡಿದುಕೊಂಡು ಇಬ್ಬರು ವ್ಯಕ್ತಿಗಳು ಮರಣ ಹೊಂದಿದ್ದಾರೆ. ಆ ಒಂದು ಕಷ್ಟದಿಂದ ಆಕೆಯನ್ನು ಹೊರ ತೆಗೆಯುವುದು ಸುಮಾರು ೨ ಗಂಟೆಗಳ ಕಾಲ ತಡವಾಯಿತು. ಮಳೆ ಬೆರೆ ಬರುತ್ತಾ ಇತ್ತು. ಆದರೂ ಬಿ.ಜಿ.ಎಂ.ಎಲ್., ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು, ಆರೋಗ್ಯ ಎನ್ನುವವರ ನೇತೃತ್ವದಲ್ಲಿ ಸತತವಾದ ಪ್ರಯತ್ನದಿಂದ ಒಂದು ಪ್ರಾಣವನ್ನು ಉಳಿಸುವುದಕ್ಕೆ ಸಾಧ್ಯವಾಯಿತು. ಈ ಒಂದು ಭಗೀರಥ ಪ್ರಯತ್ನದಲ್ಲಿ ಯಾರು ಉತ್ತಮ ರೀತಿಯಲ್ಲಿ ಕೆಲಸ ಮಾಡಿದ್ದಾರು ಎಂದರೆ, ಬಿ.ಜಿ.ಎಂ.ಎಲ್., ನ ಕೆಲಸಗಾರರು, ಮಿಲಿಟರಿ ಸಿಬ್ಬಂದಿಯವರು, ನಮ್ಮ ಪೋಲೀಸ್ ಸಿಬ್ಬಂದಿಯವರು ಮತ್ತು ಕರ್ನಾಟಕ ಫೈರ್ ಬ್ರಿಗೆಡ್ ಇವರೆಲ್ಲರಿಗೂ ಈ ಸದನದಲ್ಲಿ ಮೆಚ್ಚುಗೆಯನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ಮೊನ್ನೆ ನಿನ್ನೆ ರಾಜರಾಜೇಶ್ವರಿನಗರ ಜೊತೆ ಸಂಪರ್ಕ ಮಾಡಿದ್ದೇನೆ. ವಿಶೇಷವಾದ ಡ್ರಿಲ್ಲಿಂಗ್ ಮಿಷನ್ ಅದರ ಹೆಸರನ್ನು ಹೇಳುವುದಕ್ಕೆ ನನಗೆ ಬರುವುದಿಲ್ಲ. ಆ ಯಂತ್ರವನ್ನು ಕಳುಹಿಸಿ ಎಂಬುದಾಗಿ ಕೇಳಿದ್ದೇವೆ. ಇವತ್ತು ಮತ್ತೆ ಪ್ರಯತ್ನ ಮಾಡುತ್ತೇನೆ. ಮತ್ತೆ ಕಪಾಲಿ ಚಿತ್ರಮಂದಿರದ ಗೋಡೆ ಬಿದ್ದು ಹೋಗಬಹುದೆಂಬ ಅನುಮಾನ ಇದೆ. ಆದ್ದರಿಂದ ಅದು ಬೀಳದ ಹಾಗೆ ಅದಕ್ಕೆ ಬೇಕಾಗಿರತಕ್ಕಂತಹ ಯಂತ್ರ ಸಾಮಗ್ರಿಯನ್ನು ಇಂಡಿಯನ್ ಬಿಲ್ಡಿಂಗ್ ಕನ್ಸ್‌ಟ್ರಕ್ಷನ್ ಕಾರ್ಪೊರೆಷನ್‌ನವರ ಪತಿಯಿಂದ ಒಂದು ದೊಡ್ಡ ಯಂತ್ರವನ್ನು ತರಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಆ ಯಂತ್ರ ಇವತ್ತು ೧೦ ಗಂಟೆಯೊಳಗೆ ಕಳುಹಿಸಿಕೊಡುವುದಕ್ಕೆ ಏರ್ಪಾಡು ಮಾಡಿದ್ದಾರೆ. ಅದು ಬಂದ ತಕ್ಷಣ ಗೋಡೆಗೆ ಸಪೋರ್ಟ್ ಆಗಿ ನಿಲ್ಲಿಸಿ ಬೀಳದ ಹಾಗೆ ನೋಡಿಕೊಳ್ಳಲಾಗುವುದು. ಇದರ ಕಾರ್ಯಾಚರಣೆ ನಡೆಯುತ್ತಿದೆ. ಎಲ್ಲಾ ರೀತಿಯ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ. ನಾನು ಇಡೀ ರಾತ್ರಿ ಅಲ್ಲೇ ಇದ್ದೆ, ಬೆಳಿಗ್ಗೆ ೭ ಗಂಟೆಗೆ ಮನೆಗೆ ಬಂದೆ. ಆ ಹೆಣ್ಣುಮಗಳು ಸಂಪೂರ್ಣವಾಗಿ ರಕ್ಷಣೆಯಾದ ನಂತರ ಮನೆಗೆ ಬಂದೆ.

ಸಂತ್ರಸ್ತರು ಯಾರು ಇದ್ದಾರೆ ಅವರಿಗೆ ಪಕ್ಕದಲ್ಲಿರುವ ಹೋಟೆಲ್‌ಗಳಲ್ಲಿ ಊಟದ ವ್ಯವಸ್ಥೆ ಮತ್ತು ತಂಗುವ ವ್ಯವಸ್ಥೆಯನ್ನು ಮಾಡಿದ್ದೇವೆ. ಕೊನೆಯ ಪ್ರಾಣ ರಕ್ಷಣೆ ಮಾಡುವುದಕ್ಕೋಸ್ಕರ ಎಲ್ಲಾ ರೀತಿಯ ಪ್ರಯತ್ನಗಳು ನಡೆಯುತ್ತಿವೆ. ಈ ಪ್ರಯತ್ನದಲ್ಲಿ ಎಲ್ಲ ಅಧಿಕಾರಿಗಳು ಮೆಚ್ಚುಗೆ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಸಚಿವರಾದಂತಹ ಶ್ರೀಪಾನ್ ರಘುಪತಿಯವರು ರಾತ್ರಿ ಹಗಲು ಅಲ್ಲೇ ಇದ್ದರೆಂಬುದನ್ನು ನಾನು ಒಪ್ಪುತ್ತೇನೆ. ಯಾವ ಹೆಣ್ಣುಮಗಳನ್ನು ರಕ್ಷಣೆ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೋ ಅವರ ಸಾಹಸಕ್ಕೆ ನಾನು ಮೆಚ್ಚುಗೆಯನ್ನು ಸೂಚಿಸುತ್ತೇನೆ. ಈ ಬಹು ಆಂತಸ್ತಿನ ಕಟ್ಟಡದ ಕುಸಿತದ ವಿಚಾರದಲ್ಲಿ ಕೇಳಬೇಕಾದರೆ ಇನ್ನೂ ಕೂಡ ಇಲ್ಲಿ ಎಷ್ಟು ಜನ ಬುಕ್ಕಾಪ್ಸ್‌ನವರು ಹಾಗೂ ಇತರರು ಸಿಕ್ಕಿಹಾಕಿಕೊಂಡಿದ್ದಾರೆ, ಅವರು ಇನ್ನೂ ಕತ್ತಲಲ್ಲೇ ಇದ್ದಾರೆ, ಅವರು ಹೊರಗೆ ಇನ್ನೂ ಬಂದಿಲ್ಲ. ನಿಮ್ಮ ಹತ್ತಿರ ಇದರ ಸಂಖ್ಯೆ ಇರಬಹುದು. ಅದನ್ನು ಈ ಸದನದಲ್ಲಿ ಹೇಳಬೇಕು ಎಂದು ಪೀಳುತ್ತೇನೆ. ನನಗೆ ತಿಳಿದು ಬಂದಿರುವ ಪ್ರಕಾರ ಸುಮಾರು ೮೦ ಮಂದಿ ಅಲ್ಲೇ ಸತ್ತಿದ್ದಾರೆ. ಈ ಮಾತನ್ನು ನಾನು ಉದ್ದೇಶಪೂರ್ವಕವಾಗಿ ಪುಷ್ಟಿಟ್ಟು ಕೊಳ್ಳುತ್ತಾರೆಂದು ನಾನು ಹೇಳುತ್ತಾ ಇಲ್ಲ. ನಾನು ಈ ವಿಚಾರವನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ತಾವು ಇದರಲ್ಲಿ ಎಷ್ಟು ಮಂದಿ ಸತ್ತಿದ್ದಾರೆ ಎನ್ನುವುದನ್ನು ಈ ಸದನಕ್ಕೆ ಹಾಗೂ ರಾಜ್ಯದ ಜನತೆಗೆ ತಿಳಿಸಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನನಗೆ ಗೊತ್ತಿರುವ ಹಾಗೆ ಅಲ್ಲಿ ಇನ್ನೂ ಅನೇಕ ಜನ ಒಳಗಡೆ ಇದ್ದಾರೆ. ಈಪ್ಪೊತ್ತು ಈ ಬಗ್ಗೆ ಆಪರೇಷನ್ ಏನು ಮಾಡುತ್ತಿದ್ದೀರಿ ಅದನ್ನು ಪ್ರಾಮಾಣಿಕವಾಗಿ ಮಾಡುತ್ತಿಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ ಇದರ ನೆಟ್ ರಿಸಲ್ಟ್ ಏನು ಅದನ್ನು ತಾವು ಸಭೆಗೆ ತಿಳಿಸಬೇಕು. ಈಪ್ಪೊತ್ತು ನೀವು ಒಬ್ಬರನ್ನು ರಕ್ಷಣೆ ಮಾಡಿದ್ದೀರಿ ಎಂದು ಹೇಳಿದಿರಿ. ೪೫ ದಿವಸದ ಸತತ ಪ್ರಯತ್ನದಿಂದ ಒಬ್ಬರನ್ನು ರಕ್ಷಣೆ ಮಾಡಿದ ಹಾಗಾಯಿತು, ಅಲ್ಲಿಗೆ ಒಬ್ಬರನ್ನು ರಕ್ಷಣೆ ಮಾಡುವುದಕ್ಕೆ ಹೋಗಿ ೩೦-೪೦ ಜನ ಬಲಿಯಾಗುತ್ತಿದ್ದಾರೆ. ನಮಗೆ ಬೇಕಾಗಿರುವುದು ಇದರ ನಿಜವಾದ ಫಲಿತಾಂಶ. ೩-೪ ಟನಲ್ ಇದ್ದರೂ ಸಾಕಷ್ಟು ಪ್ರಯೋಜನವಾಗಲಿಲ್ಲ. ನಿಷ್ಪಲವಾಗಿದೆ. ಆದುದರಿಂದ ಇನ್ನೂ ಅಲ್ಲಿ ಎಷ್ಟು ಜನರು ಉಳಿದಿದ್ದಾರೆ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಈ ಬಗ್ಗೆ ನಾನು ನಿನ್ನೆಯೇ ಹೇಳಿದೆ. ಇದಕ್ಕೆ ಒಂದು ಕೋಆರ್ಡಿನೇಟೆಡ್ ಪ್ಲಾನ್ ಬೇಕು ಎಂದು. ನೀವು ಮೊದಲೇ ತಪ್ಪು ಮಾಡಿದ್ದೀರಿ, ಆದುದರಿಂದ ನೀವು ಕೈಗೊಂಡಿರ ತಕ್ಕಂಥ ಎಲ್ಲಾ ಕಾರ್ಯಕ್ರಮಗಳೂ ಸರಿಯಾಗಿವೆ ಎನ್ನುವುದರ ಬಗ್ಗೆ ಸರ್ಟಿಫಿಕೆಟ್ ಕೊಡುವುದಕ್ಕಾಗುವುದಿಲ್ಲ. ನಾನು ಕೇಳುತ್ತೇನೆ ಇದುವರೆಗೆ ಅಲ್ಲಿ ಎಷ್ಟು ಜನ ಸತ್ತಿದ್ದಾರೆ, ಎಷ್ಟು ಜನ ಅದರ ಕೆಳಗೆ ಸಿಕ್ಕಿಹಾಕಿಕೊಂಡಿದ್ದಾರೆ ಅದನ್ನು ತಿಳಿಸಬೇಕು. ಈಗ ತಾವು ಕೊಟ್ಟ ಹೇಳಿಕೆ ಪರ್‌ಫೆಕ್ಟ್ ಸ್ಟೇಟ್‌ಮೆಂಟ್ ಎಂದು ಹೇಳುವುದಕ್ಕಾಗುವುದಿಲ್ಲ. ನನಗೂ ಗೊತ್ತಿದೆ. ಬಿ.ಜಿ.ಎಂ.ಎಲ್, ಮಿಲಿಟರಿ, ಪೋಲೀಸ್‌ನವರು ಎಲ್ಲರನ್ನೂ ಇನ್ನೂ ಬೇರೆ ಬೇರೆಯವರನ್ನು ಕರೆಯಿಸಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೀರಿ ಎನ್ನುವುದು ಗೊತ್ತಿದೆ. ಆ ವಿಚಾರದಲ್ಲಿ ಡಿಸ್‌ಪ್ಯೂಟ್ ಏನೂ ಇಲ್ಲ. ಆದರೆ ಇದರ ನೆಟ್ ರಿಸಲ್ಟ್ ನಮಗೆ ಇನ್ನೂ ಬಂದಿಲ್ಲ. ಈ ಬಗ್ಗೆ ಇನ್ನೂ ಗೊಂದಲಮಯ ವಾತಾವರಣ ಇರುವುದರಿಂದ ತಾವು ತಿಳಿಸಬೇಕು. I am not passing any reflection or attributing motives. After all you are doing your best. ಆದರೂ ನಿಮ್ಮ ಪ್ರಯತ್ನ ಅಷ್ಟು ಫಲಕಾರಿಯಾಗಲಿಲ್ಲ, ನಿಷ್ಪಲವಾಗಿದೆ ಎಂದು ಹೇಳಬೇಕಾಗಿದೆ.

ಶ್ರೀ ಎಂ.ಎಸ್. ಕೃಷ್ಣನ್.—ನಾನೂ ಸಹ ಆ ಜಾಗಕ್ಕೆ ಎರಡು ಸಲ ಹೋಗಿದ್ದೇನೆ. ನಿನ್ನೆಯ ದಿವಸ ಹೋದಾಗ ಅಲ್ಲಿ ಆ ಜನರೇ ಹೇಳುತ್ತಿದ್ದರು, ಏನೆಂದರೆ ಅಲ್ಲಿ ಇರುವ ಡೆಬ್ರೀಸ್‌ಗಳನ್ನು ತೆಗೆಯಬೇಕಾದರೆ ಮೇಲಿಂದಲೆ ಇರುವ ಗರ್ಡರ್‌ಸ್ಲನ್ನು ತೆಗೆದರೆ ಸರಿಹೋಗುತ್ತದೆ ಎಂದು. ಅದನ್ನು ತೆಗೆಯದೇ ಆದಿಯಲ್ಲಿರುವ ಜನರನ್ನು ಉಳಿಸುವುದಕ್ಕೆ ಹೋಗುತ್ತಿದ್ದಾರೆ. ಅಲ್ಲಿ ಇನ್ನೂ ಕೆಲವರು ಗರ್ಡರ್‌ಸ್ಲನ್ನು ತೆಗೆದರೆ ಕೆಳಗೆ ಕುಸಿದು ಬಿಡುತ್ತದೆ ಆದರಿಂದ ಆದರ ಪ್ರಯತ್ನ ನಡೆಯದೆ ಆಡಿಯಲ್ಲಿರುವ ಜನರ ಪ್ರಾಣವನ್ನು ಉಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಇದು ಸೈಕಲ್ ಸ್ಟ್ಯಾಂಡ್‌ನವರು, ಇನ್ನು ಬೇರೆಯವರನ್ನು ಉಳಿಸುವ ಪ್ರಶ್ನೆ ಅಲ್ಲ. ಈಗಿನ ಒಂದು ಪರಿಸ್ಥಿತಿಯನ್ನು ನೋಡಿದರೆ ಕೆಳಗೆ ಇರತಕ್ಕಂಥ ಜನರನ್ನು ರಕ್ಷಿಸಬೇಕಾದರೆ ಮೇಲಿಂದಲೆ ಇರತಕ್ಕಂಥ ಗರ್ಡರ್ಸ್ ಅನ್ನು ತೆಗೆಯಬೆಕಾಗಿದೆ. ಅದಕ್ಕೆ ಇಲ್ಲಿ ಸರಿಯಾದಂಥ ಯಂತ್ರಗಳು, ಕ್ರೇನ್‌ಗಳು ಇಲ್ಲದೇ ಇರುವುದರಿಂದ ಕೆಲಸ ಮಾಡುತ್ತಾ ಇಲ್ಲ ಎಂದು ಅಲ್ಲಿ ನಿಮ್ಮ ಜನರೇ ಹೇಳುತ್ತಿದ್ದಾರೆ. ಈಗ ತಾವೇ ನೋ ಹೇಳಿದಿರಿ ಗರ್ಡರ್ ಅನ್ನು ಕಟ್ ಮಾಡತಕ್ಕಂಥ ಮಿಷನ್ ಇದೆ. ಅದನ್ನು ತರಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದು. ಅಲ್ಲಿ ಇದಕ್ಕೆ ಬೇಕಾದಂಥ ಡ್ರಿಲ್ಲಿಂಗ್ ಮೆಷನ್ ಇದೆ, ಅದನ್ನೆಲ್ಲಾ

ಶೀಘ್ರವಾಗಿ ತರಿಸಿ ಕೆಲಸ ಮಾಡಿ. ಇನ್ನೊಂದು ವಿಷಯ ಏನೆಂದರೆ ಬ್ಲಾಸ್ಟರ್ ಮಾಡುತ್ತೇವೆ ಎಂದು ಹೇಳಿದ್ದೀರಿ. ಬ್ಲಾಸ್ಟರ್ ಮಾಡಿದರೆ ಅದು ಒಳಕ್ಕೆ ಹೋಗುತ್ತದೆ. ಅಷ್ಟು ಪ್ರಯೋಜನ ವಾಗಲಾರದು. ಇದರ ಬಗ್ಗೆ ಯೋಚನೆ ಮಾಡಿ ಕೆಲಸ ಮಾಡಿ ಅವರ ಜೀವವನ್ನು ಉಳಿಸಿದರೆ ಒಳ್ಳೆಯದು.

ಶ್ರೀ ಪಿ. ರಾಂದೇವ್.—ಈ ಒಂದು ಘಟನೆ ಏನು ಇದೆ ಅದು ಹೊಸದೇನೂ ಅಲ್ಲ. ಡೆಲ್ಲಿಯಲ್ಲಿ ಈ ತರಹದ್ದೇ ಒಂದು ಘಟನೆ ನಡೆದು ಅಲ್ಲಿ ಡೇಬ್ಲಾನ್‌ನ್ನು ಬೇಗ ತೆಗೆದಿದ್ದಾರೆ, ಆದುದರಿಂದ ಅಲ್ಲಿಯೂ ಕೂಡ ಹ್ಯಾಮರ್ಸ್, ಬೇಕಾದ ಮಿಷನರಿಯನ್ನು ತರಿಸುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್.—ನಾನು ಹೇಳುವುದು ಇಷ್ಟೆ. ಈಗಾಗಲೇ ೫-೬ ದಿನ ಕಳೆದು ಹೋಗಿದೆ. ಆದುದರಿಂದ ಆ ಜನರಲ್ಲಿ ಎಷ್ಟು ಜನ ಬದುಕಿದ್ದಾರೆ, ಎಷ್ಟು ಜನ ಸತ್ತಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳಲು ಕಾತುರತೆ ಇದೆ. ಆದುದರಿಂದ ಇದರಲ್ಲಿ ಸತ್ಯಾಂಶ ಏನು ಇದೆ ಅದನ್ನು ಸಭೆಯ ಮುಂದೆ ಇಡಬೇಕು. ಈ ಬಗ್ಗೆ ತಾವು ಏನು ಯೋಚನೆ ಮಾಡಿದ್ದೀರಾ ಅದನ್ನೂ ಸಹ ಹೇಳಬೇಕು.

ಶ್ರೀ ಬಾಪೂಗೌಡ ದರ್ಶನಾಪೂರ್.—ಸ್ವಾಮಿ, ಈಗ ಏನಾಗಿದೆ ಎಂದರೆ ಸರ್ಕಾರದವರು ಇದರ ಬಗ್ಗೆ ಒಂದು ಹೆಚ್ಚಿನ ಕಾಳಜಿ ಹಾಗೂ ಮುತುವರ್ಜಿ ವಹಿಸಿ ಏನು ಪ್ರಯತ್ನ ಮಾಡುತ್ತಿದ್ದರೂ ಕೂಡ ನನಗೆ ತಿಳಿದಿರುವ ಹಾಗೆ ಹೇಳಬೇಕಾದರೆ ಇದರಲ್ಲಿ ಈವೊತ್ತು ಸತ್ತವರ ಸಂಬಂಧಿಕರು ಏನು ಇದ್ದಾರೆ ಅವರಿಗೆ ಯಾವ ರೀತಿ ಒಂದು ವ್ಯವಸ್ಥೆ ಆಗಬೇಕೋ ಅದು ಆಗುತ್ತಾ ಇಲ್ಲ. ನಾನೂ ಸಹ ಆ ಸ್ಥಳಕ್ಕೆ ೨-೩ ಸಲ ಭೇಟಿ ಕೊಟ್ಟಿದ್ದೇನೆ. ಆಸ್ಪತ್ರೆಗೆ ಹೋಗಿದ್ದೇನೆ. ಅಲ್ಲದೆ ನನ್ನ ಪರ್ಸನಲ್ ಸ್ಟಾಫ್ ಅನ್ನು ಅಲ್ಲಿ ಇಟ್ಟಿದ್ದೇನೆ. ನನ್ನ ಕಡೆಯ ಜನ ಈ ದುರಂತದಲ್ಲಿ ೪ ಜನ ಸತ್ತಿದ್ದಾರೆ. ಗಂಡ ಇದ್ದರೆ ಹೆಂಡತಿ ವಿಧವೆಯಾಗಿದ್ದಾಳೆ, ಹೆಂಡತಿ ಇದ್ದರೆ ಗಂಡ ವಿಧುರನಾಗಿದ್ದಾನೆ, ಗಂಡ ಹೆಂಡತಿ ಇದ್ದರೆ ಮಕ್ಕಳು ವಿಧವೆಯಾಗಿದ್ದಾರೆ. ನನ್ನ ಲೆಕ್ಕಾಚಾರದ ಪ್ರಕಾರ ನನ್ನ ಪಹಾಪುರದ ತಾಲ್ಲೂಕಿಗೆ ಸಂಬಂಧಪಟ್ಟಂತೆ ಇನ್ನೂ ೧೮೮ ಜನ ಸಿಕ್ಕಿಲ್ಲಾ. ೪ ಜನ ಸತ್ತಿದ್ದಾರೆ ಅಂತ ಲೆಕ್ಕ ಹೇಳಿದ್ದಿರಿ. ಈ ೧೮೮ ಜನದಲ್ಲಿ ಇನ್ನೂ ಎಷ್ಟು ಜನ ಸತ್ತಿದ್ದಾರೋ, ಎಷ್ಟು ಜನ ಬದುಕಿದ್ದಾರೋ ಗೊತ್ತಿಲ್ಲ. ಈಗ ಆದೇನೆ ಇರಲಿ ಅಲ್ಲಿ ಸಿಕ್ಕಿಹಾಕಿಕೊಂಡಿರುವ ನಮ್ಮ ಭಾಗದ ಜನರ ಸಂಬಂಧಿಕರು ಏನು ಇದ್ದಾರೋ ಅವರಿಗೆ ಆ ಸಂಬಂಧಿಕರು ಗಂಡನೆ ಇರಲಿ, ಹೆಂಡತಿಯೆ ಇರಲಿ, ಮಕ್ಕಳೇ ಇರಲಿ ಅವರು ಏನಾಗಿದ್ದಾರೆ ಎಂದು ತಿಳಿಯಲು ಅವರು ಅಲ್ಲೇ ಏನು ಇದ್ದಾರೆ ಅವರಿಗೆ ಸರಿಯಾದ ಒಂದು ವ್ಯವಸ್ಥೆ ಇಲ್ಲ, ನೀವು ಏನು ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆ ಅಂತ ಹೇಳುತ್ತೀರಾ, ಅದು ಅವರಿಗೆನೆ ರವಾನೆಯಾಗುತ್ತಾ ಇಲ್ಲ, ಅಲ್ಲದೆ ಈಗ ರಾತ್ರಿಯೆಲ್ಲಾ ಮಳೆ ಬರುತ್ತಾ ಇರುವುದರಿಂದ ಅವರಿಗೆ ಹೊದ್ದಿಕೊಳ್ಳಲು ಸರಿಯಾದ ಹೊದಿಕೆ ವ್ಯವಸ್ಥೆ ಇಲ್ಲಾ.

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರು ಹಾಗೆ ಹೇಳಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರು ಆ ಕ್ಷೇತ್ರದಿಂದ ಬಂದಿರತಕ್ಕಂಥಾವರು ಅಲ್ಲದೆ ಅಲ್ಲಿ ಕೆಲಸ ಮಾಡುವವರೂ ಕೂಡ ಸ್ವಲ್ಪ ಆ ಕ್ಷೇತ್ರದವರೇ. ಆದುದರಿಂದ ಅಲ್ಲಿ ಏನು ನಡೆಯುತ್ತಾ ಇದೆ ಅದನ್ನು ಹೇಳಿ. ಇದರಲ್ಲಿ ತಾವು ಇದನ್ನು ಪೊಸ್ಟ್‌ಪೋನ್ ಆಗಿ ತೆಗೆದುಕೊಳ್ಳ ಬಾರದು. ಇದು ಮಾನವೀಯತೆಯ ಪ್ರಶ್ನೆ. ಆ ಭಾಗದ ಜನರ ಬಗ್ಗೆ ಏನು ತೊಂದರೆ ಇದೆ ಅನ್ನುವುದನ್ನು ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಬಾಪೂಗೌಡ ದರ್ಶನಾಪೂರ್.—ನಾನು ಮೊದಲೇ ಹೇಳಿದ ಹಾಗೆ ಅಲ್ಲಿ ಆ ಜನರ ಸಂಬಂಧೀಕರು ಏನು ಇದ್ದಾರೆ ಅವರು ಅಲ್ಲೇ ರಾತ್ರಿಯೆಲ್ಲ ಏತಕ್ಕೆ ಉಳಿದಿದ್ದಾರೆ ಎಂದರೆ ಹೆಣ ಸಿಕ್ಕರೆ ಸಾಕು ಮಣ್ಣು ಮಾಡಿಬಿಟ್ಟು ನಮ್ಮ ಊರಿಗೆ ಹೋಗೋಣ ಎಂದು ಕಾಯುತಿದ್ದಾರೆ. ಆದರೆ ಅವರ ಸಂಬಂಧಿಕರ ಹೆಣ ಸಿಕ್ಕಿಲ್ಲ. ಆದರಲ್ಲಿ ಎಷ್ಟು ಜನ ಜೀವಂತವಾಗಿದ್ದಾರೋ ಎಷ್ಟು ಜನ ಇಲ್ಲವೋ ಗೊತ್ತಿಲ್ಲ. ಅಲ್ಲಿ ಕಾಯುತಿರುವ ಜನಕ್ಕೆ ನೀವು ಕೊಡತಕ್ಕಂಥ ಸಹಾಯ ಮುಟ್ಟಿಲ್ಲ, ಅದನ್ನು ನೇರವಾಗಿ ಮುಟ್ಟಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಅವರಿಗೆ ಒಂದು ಊಟದ ವ್ಯವಸ್ಥೆ ಇಲ್ಲ, ಅದೂ ಸಹ ನೇರವಾಗಿ ಸಿಗುವಂತೆ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಚಾಪೂಗಾಡರು ಈ ರೀತಿ ಹೇಳಿದರೆ ನನಗೆ ಬಹಳ ಆಶ್ಚರ್ಯ ವಾಗುತ್ತದೆ.

ಶ್ರೀ ಎಂ ವೀರಪ್ಪ ಮೊಯಿಲಿ.—ಅವರು ಏನು ಹೇಳುತ್ತಿದ್ದಾರೆ ಅದನ್ನು ಮಂತ್ರಿಗಳು ಕೇಳಲಿ. ಇದರಲ್ಲಿ ಪೊಸಿಷನ್ ತೆಗೆದುಕೊಳ್ಳಬಾರದು.

ಶ್ರೀ ಚಾಪೂಗಾಡ ದರ್ಶನಾಪುರ್. ನನಗೆ ನಿಮ್ಮ ಹೇಳಿಕೆ ಬೇಕಿಲ್ಲ. ಇದರಲ್ಲಿ ಪೊಸಿಷನ್ ಏನೂ ಇಲ್ಲ. ನಾನು ಈ ಮಾತನ್ನು ಎದ್ದುನಿಂತುಕೊಂಡು ಖಡಕ್ಕಾಗಿ ಹೇಳುತ್ತಿದ್ದೇನೆಂದರೆ ನಾನು ಅವರನ್ನು ಕಣ್ಣಲ್ಲಿ ನೋಡಿದವನೆಂದು ಹೇಳುತ್ತಾ ಇದ್ದೇನೆ. ಆಲ್ಲಿ ನನ್ನ ಪರ್ಸನಲ್ ಸ್ಟಾಫ್ ಇಟ್ಟಿದ್ದೇನೆ. ಅಲ್ಲದೆ ಇದರಲ್ಲಿ ನನ್ನ ಸಂಬಂಧಿಕ ಒಬ್ಬ ಸತ್ತು ಹೋಗಿದ್ದಾನೆ.

ಒಬ್ಬ ಸದಸ್ಯರು.—ಮಾನ್ಯ ಮಂತ್ರಿಗಳು ಶ್ರೀನಂತರರು, ಗಂಗಾಧರಪ್ಪನವರು ಅಂಥಾವರನ್ನಾದರೂ ತೆಗೆದುಕೊಂಡು ಬರಬೇಕಿತ್ತು. ಇವರು ಬಡವರನ್ನು ತೆಗೆದುಕೊಂಡು ಬರುತ್ತಾರೆಯೇ ?

ಶ್ರೀ ಎಂ. ರಘುಪತಿ.—ಹಾಗೆನಲ್ಲ. ನಾನು ಎಲ್ಲರನ್ನೂ ತೆಗೆದುಕೊಂಡು ಬರುತ್ತೇನೆ. ಮಾನ್ಯ ಸದಸ್ಯರಿಗೆ ಬೇಳೆ ಕಾಳುಗಳು ಸಂಬಂಧಿಕರು ಇಳಿದುಕೊಳ್ಳಲು ಅಲ್ಲಿರುವ ಕೆಂಚಮ್ಮಬಾಲಾಡ್ಜ್‌ನಲ್ಲಿ ವ್ಯವಸ್ಥೆ ಮಾಡಿದ್ದೇನೆ. ಅವರು ರಾತ್ರಿ ಮಲಗಿಕೊಳ್ಳಲು ೧೬ ಕಂಬಳಿಗಳನ್ನು ತರಿಸಿಕೊಟ್ಟಿದ್ದೇವೆ. ನಾನೆ ವಿದ್ಯಾಗಿ ನಿಂತು ತಕ್ಕ ವ್ಯವಸ್ಥೆ ಮಾಡಿದ್ದೇನೆ. ಅಲ್ಲದೆ ರಾಯಲ್ ಲಾಡ್ಜ್‌ನಲ್ಲೂ ಕೂಡ ವ್ಯವಸ್ಥೆ ಮಾಡಿದ್ದೇನೆ ಅಲ್ಲಿ ಮೂರಾರು ಜನರಿಗೆ ಕಂಬಳಿಯನ್ನು ತರಿಸಿಕೊಟ್ಟಿದ್ದೇವೆ. ಅಲ್ಲಿ ಕೆಳಗೆ ಇರುವವರನ್ನು ನಾವು ಮೇಲಕ್ಕೆತ್ತುವ ಕಾರ್ಯವನ್ನು ವ್ಯವಸ್ಥಿತವಾಗಿ ಮಾಡುತ್ತಿದ್ದೇವೆ ಎನ್ನುವ ವಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ನಾವು ಅವರಿಗೆ ಊಟದ ವ್ಯವಸ್ಥೆಯನ್ನೂ ಕೂಡ ಮಾಡಿದ್ದೇವೆ, ನಾನೂ ಕೂಡ ಅವರ ಜೊತೆಯಲ್ಲಿ ಊಟ ಮಾಡಿದ್ದೇನೆ. ಇಲ್ಲಿ ಮಾನ್ಯ ಸದಸ್ಯರುಗಳು ನಾವು ಶ್ರೀನಂತರನ್ನು ಆಲ್ಲಿಗೆ ಹೋಗಿ ನೋಡುತ್ತಿದ್ದೇವೆಂದು ಹೇಳಿದರೆ ಇದು ಬಹಳ ದುಃಖಕರವಾದ ಸಂಗತಿ. ನಾವು ಇಲ್ಲಿ ಬಡವರಿಗೆ ಆಸ್ಥೆಯನ್ನು ಕೊಟ್ಟಿದ್ದೇವೆ. ವಿಮಾನಾಕ್ಷಿ ಎನ್ನುವ ಹೆಣ್ಣು ಮಗಳನ್ನು ಕಾಪಾಡಿದ್ದೇವೆ. ಅವರು ಬಹಳ ಬಡವರು. ಈ ತರಹ ನಾವು ವಿಶೇಷ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ನಾವು ಇಂದು ಬೆಳ್ಳಿಗ್ಗೆ ಇನ್‌ಸ್ಪೆಕ್ಟರ್‌ನ ಅಧಿಕಾರಿಗಳನ್ನು ಕರೆಯಿಸಿ ಚರ್ಚೆ ಮಾಡಿದ್ದೇವೆ, ಮಾನ್ಯ ಪೊಲೀಸ್ ಕಮೀಷನರವರು ಪ್ರಸ್ತಾಪ ಮಾಡಿದಂತೆ ಸ್ಪೀಡ್‌ನ್ನು ಆದು ಎಕ್ಸ್‌ಪ್ರೆಸ್ ಆಗಿದ್ದರೂ ಕೂಡ ಎಕ್ಸ್‌ಟೆಂಡ್ ಮಾಡಲಿಕ್ಕೆ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆಂದು ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುವುದಕ್ಕೆ ನಾನು ಇಷ್ಟಪಡುತ್ತೇನೆ. ಇದರಲ್ಲಿ ಪ್ರಿ ವಿಯಂ ಹಣ ಕೊಡಿಸುವುದಕ್ಕೆ ಸರ್ಕಾರ ಪ್ರಯತ್ನ ಕೂಡ ಮಾಡುತ್ತಿದ್ದೇವೆ. ಮತ್ತೆ ಸಾಯಂಕಾಲ ನಾನು ಅಲ್ಲಿಗೆ ಭೇಟಿ ಕೊಟ್ಟು ಬಂದು ವಿಚಾರವನ್ನು ತಮಗೆ ತಿಳಿಸುತ್ತೇನೆ.

ಶ್ರೀ ಎಚ್. ಗಂಗಾಧರಪ್ಪ.—ಸರ್ಕಾರದವರು ಪರಿಹಾರವನ್ನು ಇವರಿಗೆ ಕೊಟ್ಟಿದ್ದಿರಾ ?

ಶ್ರೀ ಎಂ. ರಘುಪತಿ.—ನಾವು ಈ ಆಪರೇಷನ್‌ನ್ನು ಎಷ್ಟು ದಿವಸ ಮಾಡಬೇಕು ಎನ್ನುವುದನ್ನು ಅಲ್ಲಿರುವಂಥ ಟೆಕ್ನಿಕಲ್ ಎಕ್ಸ್‌ಪರ್ಟ್ಸ್‌ಗೆ ಬಿಟ್ಟಿದ್ದೇವೆ. ನಾವು ಇದರಲ್ಲಿ ಹಸ್ತಕ್ಷೇಪ ಮಾಡುತ್ತಿಲ್ಲ. ಅವರಿಗೆ ನಮ್ಮ ಸಹಾಯವನ್ನು ಕೊಟ್ಟಿದ್ದೇವೆ ಮತ್ತು ಅವರಿಗೆ ಯಾವ ಯಾವ ಸಲಕರಣೆಗಳು ಬೇಕೋ ಅವೆಲ್ಲವನ್ನು ಒದಗಿಸುತ್ತಿದ್ದೇವೆಂದು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಬಿ. ರಾಮಚಂದ್ರಪ್ಪ.—ಈ ಆಪರೇಷನ್ ಕಾರ್ಯಾಚರಣೆಯಲ್ಲಿ ಯಾರು ಯಾರು ಇನ್ ಚಾರ್ಜ್ ಇದ್ದಾರೆ ?

ಶ್ರೀ ಎಂ. ರಘುಪತಿ.—ಪೊಲೀಸ್ ಕಮೀಷನರ್ ಇನ್‌ಚಾರ್ಜ್ ಇದ್ದಾರೆ, ಹೋಂ ಕಮೀಷನರ್ ಅವರು ಖುದ್ದಾಗಿ ಕೋ-ಆರ್ಡಿನೇಟ್ ಮಾಡುತ್ತಿದ್ದಾರೆ.

ಶ್ರೀ ಚಾಪೂಗಾಡ ದರ್ಶನಾಪುರ.—ಈ ಘಟನೆಯಲ್ಲಿ ಸರ್ಕಾರದವರು ಪ್ರೆಸ್ಟೀಜ್ ಇಟ್ಟುಕೊಂಡು ನೋಡಬಾರದು. ಒಬ್ಬ ಮುದುಕನ ಮಗ ಸತ್ತಿದ್ದಾನೆ, ಆ ಮುದುಕ ಮಗನನ್ನು ಹೇಗೆ ಮಣ್ಣು

ಮಾಡಬೇಕು? ಅಲ್ಲಿ ಯಾರೂ ಸಹ ಹೇಳುವವರು ಇಲ್ಲ ಕೆಳುವವರು ಇಲ್ಲ. ನಮ್ಮ ಸರ್ಕಾರ ಇದನ್ನು ಸೀರಿಯಸ್ ಆಗಿ ನೋಡಬೇಕು. ನಿವುಗಳು ಅಲ್ಲಿಗೆ ಹೋದಾಗ ಹೋಟೆಲ್‌ನವರು ನೊಂದವರಿಗೆ, ನಿರ್ಗತಿಕರಿಗೆ ಊಟಕ್ಕೆ ಕೊಡಬಹುದು, ನಿವು ಈ ಕಡೆ ಬಂದನಂತರ ಮೂರು ಹೊತ್ತು ಅವರಿಗೆ ಊಟಕ್ಕೆ ಕೊಡುವ ವ್ಯವಸ್ಥೆ ಇದೆಯೇ? ಅಲ್ಲಿ ಯಾರಾದರೂ ಒಬ್ಬರು ಸರ್ಕಾರದ ಪರವಾಗಿ ಜವಾಬ್ದಾರಿ ತೆಗೆದುಕೊಂಡವರು ಇರಬೇಕು ಎಂದು ನಾನು ಹೆಳುವುದು. ಮಂತ್ರಿಗಳು ಹೋದಾಗ ಅಲ್ಲಿರುವವರು ನಾಟಕ ಮಾಡುವುದು ಬೇಕಾಗಿಲ್ಲ. ಕೆಲವಾರು ಅಧಿಕಾರಿಗಳವರು ೪೦-೫೦ ಜನಕ್ಕೆ ಊಟ ಹಾಕುವುದಕ್ಕೆ ಸಾಧ್ಯವೇ? ನಿವು ಹೋದಾಗ ಅವರು ಸಿನ್ಸಿಯರ್ ಆಗಿ ಮಾಡಬಹುದು ನೀವು ಈ ಕಡೆ ಬಂದಮೇಲೆ ಅವರನ್ನು ಯಾರು ಕೆಳುತ್ತಾರೆ? ಆದ್ದರಿಂದ ಇದರ ಬಗ್ಗೆ ತಾವು ಸರಿಯಾದ ವ್ಯವಸ್ಥೆಯನ್ನು ಮಾಡಬೇಕು. ನಾನು ಯಾವ ವೆಚ್ಚಕ್ಕೂ ಆಪಾದನೆ ಮಾಡಬೇಕು ಅಥವಾ ಟೀಕೆ ಮಾಡಬೇಕು ಎಂದು ಇದನ್ನು ಹೆಳುತ್ತಿಲ್ಲ.

ಶ್ರೀ ಎಂ ವೀರಪ್ಪ ಮೊಯಿಲಿ.—ಈಗ ಅಲ್ಲಿ ಬಿ.ಇ.ಎಲ್. ನವರು, ಆರ್ಮಿಯವರು, ಹಾಗೂ ಪೋಲೀಸರು ಇದ್ದಾರೆ. ಪ್ರತಿಯೊಬ್ಬರನ್ನು ಸರಿಯಾದ ರೀತಿಯಲ್ಲಿ, ರೆಗ್ಯುಲೇಟ್ ಮಾಡತಕ್ಕ ಒಂದು ಜವಾಬ್ದಾರಿಯುತವಾದ ಕೆಲಸ ಆಗುತ್ತಿಲ್ಲ. All those Heads of the Departments should put their heads together, but I am sorry it has not been done. I have ascertained this. They must put their heads together and let the Chief minister go there. ಎಲ್ಲರೂ ಕುಳಿತುಕೊಂಡು ಒಂದು ಕೋ-ಆರ್ಡಿನೆಟೆಡ್ ಪ್ಲಾನ್ ಮಾಡಿಕೊಂಡು ಆದಷ್ಟು ಜಾಗ್ರತೆ ಇದನ್ನು ಮಾಡಬೇಕು. After all Military, Army and others are involved. we are not telling that people are not putting their efforts. ಆಮೇಲೆ ಇದರ ಆರ್ಕಿಟೆಕ್ಟ್ ಯಾರು ಇದ್ದಾರೆ ಅವರನ್ನು ಇವತ್ತಿನವರೆಗೂ ಇವರು ಕರೆಯಿಸಲಿಲ್ಲ. Even today the Architect has not landed here from Bombay, who has put up his structure. He would have been the most useful person. ಅವರು ಇನ್ನುವರೆಗೂ ಬರಲಿಲ್ಲ. ಅವರಿಗೆ ಈ ಕಟ್ಟಡದ ಪ್ಲಾನ್ ಇದುವರೆಗೂ ಸಿಕ್ಕಿದೆಯೋ ಇಲ್ಲವೊ ಗೊತ್ತಿಲ್ಲ. ಅಲ್ಲಿ ಒಬ್ಬರು ತಮ್ಮ ತಂಗಿಯನ್ನು ಕಳೆದುಕೊಂಡಿರುವವರು ಇದ್ದರೆ ಪೋಲಿಸರು ಅವರನ್ನು ಸರಿಯಾಗಿ ಶಾಂತಿಯಿಂದ ಕೇಳುವಷ್ಟು ಸಹನೆಯೂ ಇಲ್ಲ. ಇಂಥ ಅಧಿಕಾರಿಗಳನ್ನು ಆ ಜಾಗದಲ್ಲಿ ಹಾಕಬೇಡಿ. ಸಾರ್ವಜನಿಕ ಸಂಪರ್ಕ ಇರುವ ಮತ್ತು ಅವರ ಬಗ್ಗೆ ಅನುಕಂಪ ಇರುವ ಅಧಿಕಾರಿಗಳನ್ನು ಮಾತ್ರ ಅಲ್ಲಿಗೆ ತಾವು ಹಾಕಬೇಕು. Even after telling that his sisters are involved, he said "What business you have here?". I am also told till the other day Gangaram was not heard. He is a very important person. He would have been important informant. I appreciate that the experts would like to put their sincere efforts but all the people have not put their heads. ಆದ್ದರಿಂದ ತಾವು ಇಲ್ಲಿ ಅಸಹನೆಯನ್ನು ತೋರಿಸಬೇಡಿ. ನಿವು ಇಲ್ಲಿ ಅಸಹನೆಯನ್ನು ತೋರಿಸಿದರೆ ಅಲ್ಲಿ ಕೆಲಸ ಮಾಡತಕ್ಕವರು ಸಹ ಅಸಹನೆಯನ್ನು ತೋರಿಸುತ್ತಾರೆ. ದಯವಾಡಿ ತಮ್ಮ ಉತ್ತರ ಈಗ ಬೇಡ, ತಮ್ಮ ಉತ್ತರವನ್ನು ಸಂಜೆಯ ಹೊತ್ತಿಗೆ ಕೊಡಿ. ಅಲ್ಲಿ ಕೆಲಸ ಮಾಡತಕ್ಕವರಲ್ಲಿ ಸರಿಯಾದ ಕೋ-ಆರ್ಡಿನೆಷನ್ ಇಲ್ಲ.

ಶ್ರೀ ಎಂ. ರಘುಪತಿ.—ನಾವು ಅಲ್ಲಿ ಕೆಲಸ ಮಾಡುತ್ತಿರುವ ಮಿಲಿಟರಿ ಅಧಿಕಾರಿಗಳನ್ನು, ಪೋಲೀಸ್ ಅಧಿಕಾರಿಗಳನ್ನು ಮತ್ತು ಮುಖ್ಯ ಇಂಜಿನಿಯರ್ ಮತ್ತು ಸೆಕ್ರೆಟರಿ ಅವರೆಲ್ಲರೊಂದಿಗೆ ವಿಷಯವನ್ನು ಚರ್ಚೆ ಮಾಡಿದ್ದೇವೆ. ಆ ಸ್ಥಳಕ್ಕೆ ಹೋಗಿ ಜಾಗವನ್ನು ಪರಿಶೀಲನೆ ಮಾಡಿದ್ದೇವೆ. ಮುಖ್ಯ ಮಂತ್ರಿಗಳು ಬಂದು ಹೋಗಿದ್ದಾರೆ. ಇವತ್ತೂ ಸಹ ಬೆಳಿಗ್ಗೆ ನಾವು ಇವರೊಂದಿಗೆ ಮಾತನಾಡುತ್ತಿದ್ದೆವೆ. ಇವರೆಲ್ಲರ ಕೋ-ಆರ್ಡಿನೆಟೆಡ್ ಎಫರ್ಟ್ಸ್ ಎಲ್ಲಾ ರೀತಿಯಿಂದಲೂ ನಡೆಯುತ್ತಿದೆ. ಇದಕ್ಕೆ ಏನೆ ನು ಪ್ರಯತ್ನಗಳನ್ನು ಮಾಡಬೆಕೋ ಆ ಪ್ರಯತ್ನಗಳನ್ನು ಸರ್ಕಾರ ಮಾಡುವುದಕ್ಕೆ ಸಿದ್ಧವಿದೆ.